# Press Clipping

**Publication** : Sanjevani

**Date** : May 12, 2016

**Edition** : State

**Page** : 4

The Resource Centre

---

# ಭಾವನೆಗಳ ನಿರುತ್ತರ



ಮಧ್ಯಮ ವಯಸ್ಸಿನ ಮಹಿಳೆಯ 'ಭಾವನೆ'ಗಳ ತಿಕ್ಕಾಟ ಮತ್ತು ಸಂಘರ್ಷಗಳ ಸುತ್ತ ಹೆಣೆಯಲಾಗಿರುವ "ನಿರುತ್ತರ" ಚಿತ್ರ ಚಿತ್ರೀಕರಣ ಪೂರೈಸಿ ಬಿಡುಗಡೆಯ ಹಂತಕ್ಕೆ ಬಂದು ನಿಂತಿದೆ.

ಹಿರಿಯ ನಟಿ ಭಾವನಾ ರಾಮಣ್ಣ ಹಾಗು ಅವರ ಸಹೋದರ ಅರವಿಂದ್ ರಾಮಣ್ಣ ನಿರ್ಮಾಣ ಮಾಡಿರುವ ಈ ಚಿತ್ರದಲ್ಲಿ ಭಾವನಾ, ರಾಹುಲ್ ಬೋಸ್, ಕಿರಣ್,ಐಂದ್ರಿತಾ ರೇ ಸುತ್ತಾ ಸಾಗುವ ಚಿತ್ರವನ್ನು ಚೊಚ್ಚಲ ಬಾರಿಗೆ ಹಿರಿಯ ನಿರ್ದೇಶಖ ಗಿರೀಶ್ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶನ ಮಾಡಿದ್ದಾರೆ. ಆಸ್ಕರ್ ಪ್ರಶಸ್ತಿ ಪಡೆದ ರಸೂಲ್ ಪೂಕುಟ್ಟಿ ಚಿತ್ರಕ್ಕೆ ಧ್ವನಿ ಗ್ರಹಣ ಮಾಡಿದ್ದಾರೆ. ಚಿತ್ರದ ಬಗ್ಗೆ ಮಾಹಿತಿ ನೀಡಲು ಕಳೆದ ಮಂಗಳವಾರ ಚಿತ್ರತಂಡ ಮಾಧ್ಯಮದ ಮುಂದೆ ಹಾಜರಾಗಿತ್ತು.

ನಟಿ ಭಾವನಾ ಮಾತನಾಡಿ,ನಿರ್ಮಾಪಕರಾದರೂ ಕಥೆಯ ಬಗ್ಗೆ ತಲೆ ಕಡೆಸಿಕೊಂಡಿಲ್ಲ ನಿರ್ದೇಶಕರಿಂದ ಬರುವ ನಿರ್ದೇಶನವನ್ನು ಪಾಲಿಸುವುದು ನನ್ನ ಕೆಲಸ.ಮೊದಲೆರಡು ದಿನ ನಟನೆ ಮಾಡುವುದು ಕಷ್ಟವಾಗುತ್ತಿತ್ತು,ದೇಹದ ಯಾವುದೇ ಮಸಲ್‌ಗಳು ಅಲುಗಾಡುತ್ತಿರಲಿಲ್ಲ ಆಮೇಲೆ ನನಗೆ ನಟನೆ ತೃಪ್ತಿ ಆಗದ ಹಿನ್ನೆಲೆಯಲ್ಲಿ ಆ ಮೇಲೆ ಒಪ್ಪಿಕೊಂಡೆ.ಗಂಡನಿಗೂ ನನಗೂ ಯಾವುದರಲ್ಲಿಯೂ ಹೊಂದಿಕೊಳ್ಳುವುದಿಲ್ಲ, ಆಕೆಯ ಸಂಘರ್ಷ ಭಾವನೆಗಳ ತೊಳಲಾಟ,ಚಿಕ್ಕ ಚಿಕ್ಕದರಲ್ಲಿಯೇ ತೃಪ್ತಿ ಕಂಡುಕೋಲ್ಳುವ ಆಕೆ ಏನೆಲ್ಲಾ ಕಳೆದುಕೊಳ್ಳುತ್ತಾಳೆ ಏನೆಲ್ಲಾ ಪಡೆದುಕೊಳ್ಳುತ್ತಾಳೆ ಎನ್ನುವುದು ನನ್ನ ಪಾತ್ರದ ವಿಶೇಷ,ನಾಲ್ವರದು ಒಂದೊಂದು ಪಾತ್ರ.

ಒಂದೊಂದು ರೀತಿ ಇದೆ. ಚಿತ್ರ ಚೆನ್ನಾಗಿ ಮೂಡಿ ಬಂದಿದೆ ಒಳ್ಳೆಯ ಚಿತ್ರವಾಗಲಿದೆ ಎನ್ನುವ ವಿಶ್ವಾಸವಿದೆ ಎಂದು ವಿವರ ನೀಡಿದರು. ನಿರ್ದೇಶಕರ ಅಪೂರ್ವ,ಒಳ್ಳೆಯ ಸಿನಿಮಾ ಆಗಲಿದೆ, ಎಲ್ಲರೂ ಚೆನ್ನಾಗಿ ನಟಿಸಿದ್ದಾರೆ. ರಾಮಚಂದ್ರ ಅವರ ಕ್ಯಾಮರ ಚೆನ್ನಾಗಿ ಮೂಡಿಬಂದಿದೆ.ನಾಲ್ಕು ಪಾತ್ರಗಳ ಸುತ್ತಾ ಸಾಗುವ ಕತೆ ಹೊಂದಿರುವ ಚಿತ್ರ ಇದು ಎಂದರು.

ನಟಿ ಐಂದ್ರಿತಾ ರೇ,ವಿಭಿನ್ನವಾದ ಪಾತ್ರ, ಕಂನಂ ಮನಾಲಿ, ರಾಜಸ್ತಾನ ಸೇರಿದಂತೆ ಮತ್ತಿತರ ಕಡೆ ಚಿತ್ರೀಕರಿಸಲಾಗಿದೆ ಒದೊಂದು ಸನ್ನಿವೇಸಕ್ಕೂ ಹತ್ತು ಟೇಕ್ ತೆಗೆದುಕೊಂಡಿದ್ದೇನೆ ಎಂದರೆ ನಟ ಕಿರಣ್ ವೃತ್ತಿ ಜೀವನದಲ್ಲಿ ತೃಪ್ತಿ ಕೊಟ್ಟ ಪಾತ್ರ.ಒಳ್ಳೆಯ ಸಿನಿಮಾವಾಗಲಿದೆ ಎನ್ನುವ ವಿಶ್ವಾಸವಿದೆ ಎಂದು ಹೇಳಿಕೊಂಡರು.

ನಿರ್ಮಾಪಕ ಅರವಿಂದ್ ರಾಮಣ್ಣ, ಚಿತ್ರಕ್ಕೆ ಏನು ಬೇಕೋ ಅದನ್ನು ಒದಗಿಸಿದ್ದೇನೆ.ಚಿತ್ರ ಮೊದಲು ನಾನು ನೋಡುವಂತಿರಬೇಕು ಎನ್ನುವ ಕಾರಣಕ್ಕಾಗಿ ಸಿನಿಮಾ ಮಾಡಿದೆ ಎಂದು ವಿವರ ನೀಡಿದರು.